tions, remedy is already there. Under the present law the aggrieved party can claim damages.

ಶ್ರೀ ಎಸ್. ಸೂರ್ಯನಾರಾಯಣರಾವ್.— ಅವರಿಬ್ಬರೂ ಶಾಮೀಲಾಗಿದ್ದಾಗ ಏನು ಮಾಡುವುದು ?

Sri A. Lakshmisagar.— Only other matters like delay, harassment can be brought before it.

Sri M. Veerappa Moily.— Under an agreement, purchase of chassis for KSRTC ; purchase of machinary, tender for construction of building ಇದನ್ನೆಲ್ಲಾ ಪ್ರಶ್ನೆ ಮಾಡಬಾರದು ಎಂದು ಹೇಳಿದರೆ ಹೇಗೆ ?

Sri A. Lakshmisagar.— There the aggrieved party has a remedy.

Mr. Speaker.— I will now put the amendment of Sri M. S. Krishnan and others to 2nd Schedule to the vote of the House. The question is :

"That item (c) of Second Schedule to Sub-clause (1) (a) of Clause 8 shall be deleted."

The amendment was negatived

Mr. Speaker.— The question is :

"That the Second Schedule do stand part of the Bill."

The motion was adopted

Second Schedule was added to the Bill

Clause I etc.

Mr Speaker.— The question is :

"That Clause 1, the Long Title, the Preamble and the Enacting Formula do stand part of the Bill."

The motion was adopted

Clause 1, the Long Title, the Preamble and the Enacting Formula were added to the Bill.

ಶ್ರೀ ಭೀಮಣ್ಣ ಖಂಡ್ರೆ — ಭ್ರಷ್ಟಾಚಾರ ರಕ್ಷಣೆ ಕಾನೂನು ಎಂದು ಇದಕ್ಕೆ ತಿದ್ದುಪಡಿ ತಂದರೆ ಒಳ್ಳೆಯದು.

Motion to pass

Sri A. Lakshmisagar (Minister for Law & Parliamentary Affairs, on behalf of Sri Ramakrishna Hegde, Chief Minister).— I move :

"That the Karnataka Lokayukta Bill, 1984 be passed."

Mr. Speaker.— The question is :

"That the Karnataka Lokayukta Bill, 1984 as amended be passed "

The motion was adopted and the Bill was passed

Announcement

Mr. Speaker.— I have received a recommendation from the Governor for consideration of the Karnataka Legislature Salaries Pensions and Allowances (Amendment) Bill, 1984.

The Karnataka Legislature Salaries, Pensions and Allowances (Amendment) Bill, 1984

Motion to consider

Sri A. Lakshmisagar (Minister for Law and Parliamentary Affairs).— Sir, I beg to move :

"That the Karnataka Legislature Salaries, Pensions and Allowances (Amendment) Bill, 1984 be taken into consideration"

The question was proposed

Sri A. Lakshmisagar.—Sir, this is a small piece of legislation. My submission is that certain members of the erstwhile Mysore Constituent Assembly, Members of Mysore Representative Assembly, Members of the Assembly and Council of former Provinces of Indian States which are now part of Karnataka have been claiming the benefit pensions on the ground that they also discharged the functions in the same manner in which the present Members are discharging. As a matter of pride and happiness they wants to claim and not as a matter of any obligation. I see justification in their demand. Large number of representations have been received in this behalf. I believe in the fitness of things their request should be granted and sanction be accorded by the Members of this House.

ಶ್ರೀ ಭೀಮಣ್ಣ ಖಂಡ್ರೆ.— ಅಧ್ಯಕ್ಷರೇ, ಇದೂ ಒಂದು ಭ್ರಷ್ಟಾಚಾರಕ್ಕೆ ಎಡೆಮಾಡಿಕೊಟ್ಟಂತಹ ಕಾನೂನು ಆಗಿದೆ. ಈ ಒಂದೆ ಒಂದು ಕಾನೂನನ್ನು ಪಾಸ್ ಮಾಡಿಕೊಂಡು ಅವರ ಮುಖಕ್ಕೆ ಅವರೇ ಮಸಿ ಬಳಿದುಕೊಂಡಿದ್ದಾರೆ. ಇದು ಒಂದು ರೀತಿಯ ರಾಜಕೀಯ ಭ್ರಷ್ಟಾಚಾರವಾಗಿದೆ. 1 ವರ್ಷ ಯಾರು ಸೇವೆ ಸಲ್ಲಿಸಿದ್ದಾರೆ, 6 ತಿಂಗಳು ಯಾರು ಸೇವೆ ಸಲ್ಲಿಸಿದ್ದಾರೆ ಅವರೆಲ್ಲರಿಗೂ ಪೆನ್‌ಷನ್ ಕೊಡುವುದು ಸಮಾಜವಾದವೇ? ಇದು ನ್ಯಾಯವೇ? ಇದು ನೀತಿಯೇ? ನೀವು ಇವತ್ತು ಬಡಜನರಿಂದ ಟ್ಯಾಕ್ಸ್ ಮೂಲಕ, ಮಾರ್ಕೆಟ್ ಸೆಸ್ ಮೂಲಕ ಹಣ ಪಡೆದು ಇವತ್ತು ಇವರಿಗೆ ಹಂಚುತ್ತಿದ್ದೀರಿ. ಇವತ್ತು ಬಡವರಿಗೆ ಒಂದು ಹೊತ್ತು ಅನ್ನ ಸಿಗುತ್ತಾ ಇಲ್ಲ ಇಂತಹ ಸಮಯದಲ್ಲಿ ಇದನ್ನು ಗಂಭೀರ ಹಠಾತ್ತೋ ಎಂದು ತಾವು ಹೇಳುತ್ತೀರಾ? ಇವತ್ತು ನಿಮ್ಮ ಆಡಳಿತವನ್ನು ಇಡೀ ಕರ್ನಾಟಕದ ಜನತೆ ಎದ್ದುನಿಂತು ನೋಡುತ್ತಿದೆ. ತಾವು ಎಷ್ಟು ಹುಷಾರಾಗಿ ಫ್ರಾಡ್ ಮಾಡುತ್ತಿದ್ದೀರಿ ಎಂಬ ಬಗ್ಗೆ ಮಾನ್ಯ ಸುಬ್ಬಯ್ಯ ನವರು ಇಲ್ಲಿಗೆ ಬಂದಾಗ ಹೇಳಿದ್ದಾರೆ. ಚಂಬಲ್ ಕಣಿವೆ ಡಾಕೂಗಳು ಎಷ್ಟು ಭಯಂಕರವಾಗಿದ್ದಾರೆ ಅಷ್ಟೇ ಭಯಂಕರದ ಜನ ಇವತ್ತು ಬಿಳೀ ಬಟ್ಟೆಯ ಮುಖವಾಡವನ್ನು ಹಾಕಿಕೊಂಡು ಕಪ್ಪು ಕಾನೂನನ್ನು ಮಾಡುತ್ತಿದ್ದೀರೆಂದು ಹೇಳಿದ್ದಾರೆ. ಇದು ಒಂದು ರೀತಿಯ ಕಪ್ಪು ಕಾನೂನು ಇದೆ. ಈಗಿನ ಪರಿಸ್ಥಿತಿ ಗುಡ್ಡ ಕಡೆದು ಇಲಿಯನ್ನು ಹಿಡಿದಂತಾಗಿದೆಯೆಂದು ನಾನು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಇವತ್ತು ಏನು ಕಾನೂನನ್ನು ಕ್ಲಾಸ್ ಮಾಡಿಕೊಂಡಿರಿ ಅದಕ್ಕೆ ಒಬ್ಬ ಒಳ್ಳೆಯ ಅಧ್ಯಕ್ಷರನ್ನು, ಮುಖ್ಯಸ್ಥರನ್ನು ನೇಮಕ ಮಾಡಬೇಕಾಗಿದೆ. ಇದು ತಪ್ಪು ಕೈಯಲ್ಲಿ ಇದೆ.

ಅಧ್ಯಕ್ಷರು — ತಾವು ಈ ಬಿಲ್‌ಗೆ ಸಂಬಂಧಪಟ್ಟ ಹಾಗೆ ಜರ್ಜೆ ಮಾಡಿ. ಹಿಂದಿನ ಬಿಲ್ ಬಗ್ಗೆ ಏಕೆ ಮಾತನಾಡುತ್ತೀರಿ?

ಶ್ರೀ ಭೀಮಣ್ಣ ಖಂಡ್ರೆ — ಅದನ್ನು ರೆಫರೆನ್ಸ್ ಆಗಿ ಇಟ್ಟುಕೊಂಡು ಈ ಬಿಲ್ ಬಗ್ಗೆ ಮಾತನಾಡುತ್ತಿದ್ದೇನೆ. ಈ ಜನತಾ ಸರ್ಕಾರ ಸಾಧು ಸಂತರೆಂದುಕೊಂಡು ಅಧಿಕಾರಕ್ಕೆ ಬಂದಿದೆ. ಇವತ್ತು ಗಾಂಧೀಜಿಯವರ ಹೆಸರು ಹೇಳಿಕೊಂಡು ಅವರ ತತ್ವದ ಪ್ರಕಾರ ನಡೆದುಕೊಳ್ಳದೇ ರಾಷ್ಟ್ರದ್ರೋಹ ಮಾಡುತ್ತಿದೆ. ಇವತ್ತಿನ ದಿವಸ ಈ ಭ್ರಷ್ಟಾಚಾರ ತೊಲಗಬೇಕಾಗಿದೆ. 1948ರಲ್ಲಿ ಏನು ಅನ್ಯಾಯ ಭ್ರಷ್ಟಾಚಾರ ಇತ್ತು ಅದರ ನೂರು ಪಟ್ಟು ಹೆಚ್ಚು ಭ್ರಷ್ಟಾಚಾರ, ಅನ್ಯಾಯ ಇವತ್ತು ಇದೆ.

ಅಧ್ಯಕ್ಷರು.— ತಾವು ಬಿಲ್ ಬಗ್ಗೆ ಮಾತನಾಡಿ ಸ್ವಾಮಿ.

ಶ್ರೀ ಭೀಮಣ್ಣ ಖಂಡ್ರೆ.— ಭ್ರಷ್ಟಾಚಾರ ಹೇಗೆ ನಡೆಯುತ್ತಿದೆ ಎಂಬುದನ್ನು ಹೇಳುತ್ತೇನೆ. ನಮ್ಮ ಮಾನ್ಯ ಮುಖ್ಯ ಮಂತ್ರಿಗಳು, ಹಾಗೂ ಸದಸ್ಯರು ಏನು ಹೇಳುತ್ತಿದ್ದಾರೆ ಹಾಗೂ ಏನು ಮಾಡುತ್ತಿದ್ದಾರೆ ಎಂಬ ಬಗ್ಗೆ ಸ್ಪಷ್ಟವಾಗಿ ಹೇಳುತ್ತೇನೆ. ಇವತ್ತಿನ ದಿವಸ ಇವರು ಈ ಒಂದು ಕಾನೂನನ್ನು ತಂದು ಇವರ ಮುಖಕ್ಕೆ ಇವರೇ ಮಸಿ ಬಳಿದುಕೊಂಡಿದ್ದಾರೆ ಎಂದು ನಾನು ಹೇಳುತ್ತೇನೆ. ಆದ್ದರಿಂದ ಮಾನ್ಯ ಮಂತ್ರಿಗಳು ಈ ಬಿಲ್‌ನ್ನು ವಾಪಸ್ಸು ತೆಗೆದುಕೊಂಡು ನಂತರ ಭ್ರಷ್ಟಾಚಾರ ನಿರ್ಮೂಲನದ ಬಗ್ಗೆ ಒಂದು ಬಿಲ್ಲನ್ನು ತೆಗೆದುಕೊಂಡು ಬಂದು ಇದನ್ನು ಇಡೀ ರಾಜ್ಯದಿಂದ ತೆಗೆದು ಹಾಕಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಜಿ ಶ್ರೀನಿವಾಸ ಮೂರ್ತಿ.— ಮಾನ್ಯ ಸದಸ್ಯರು ಮಾತನಾಡಿದ ಸ್ಪೀಡ್ ನೋಡಿದರೆ ಅವರು ಏನು ಹೇಳಿದರು ಎಂಬುದೇ ಅರ್ಥವಾಗಲಿಲ್ಲ.

ಅಧ್ಯಕ್ಷರು.— ಅವರ ಭಾಷಣವನ್ನು ಬರೀ ಕೇಳುವುದೇ ಅಲ್ಲ ಅದನ್ನು ನೋಡಿ ಅರ್ಥ ಮಾಡಿಕೊಳ್ಳಬೇಕಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).— ಅಧ್ಯಕ್ಷರೇ, ಈ ಮಸೂದೆಯನ್ನು ತಂದಿರುವ ಘನ ಉದ್ದೇಶದ ಬಗ್ಗೆ ಮಾನ್ಯ ಮಂತ್ರಿಗಳು ವಿವರಣೆಯನ್ನು ಕೊಟ್ಟಿದ್ದಾರೆ. ಇದರ ಉದ್ದೇಶ, ಯಾರು ಹಿಂದೆ ಪ್ರಜಾಪ್ರತಿನಿಧಿ ಸಭೆಯಲ್ಲಿ ಇದ್ದರು ಅಂತಹವರಿಗೂ ವಿಶ್ರಾಂತಿ ವೇತನ ಕೊಡಬೇಕೆಂದು ಇದೆ. ಇದರಿಂದಾಗಿ ಹಿಂದೆ ಯಾರು ಹಳೇ ಬಾಂಬೆ ಕರ್ನಾಟಕದಲ್ಲಿ ಇದ್ದರೂ ಅವರಿಗೂ ವಿಶ್ರಾಂತಿ ವೇತನ ಕೊಡಬೇಕಾಗುತ್ತದೆ. ಆಗಿನ ಕಾಲದಲ್ಲಿ ಪ್ರಜಾಪ್ರಭುತ್ವ ಪದ್ಧತಿ ಇತ್ತೇ ಎಂಬುದನ್ನು ನಾವು ಈಗ ಯೋಚನೆ ಮಾಡಬೇಕಾಗುತ್ತದೆ. ಆಗಿನ ರಾಜ ಮಹಾರಾಜರ ದಬ್ಬಾಳಿಕೆಯ, ದೌರ್ಜನ್ಯಗಳ ವಿರುದ್ಧ ಹೋರಾಡಬೇಕಾಗಿತ್ತು. ಹೈದರಾಬಾದಿನ ರಜಾಕರ್ ಮೂವ್‌ಮೆಂಟ್ ವಿರುದ್ಧ ಜನ ಹೋರಾಡುತ್ತಿದ್ದರು. ಇಲ್ಲೂ ಕೂಡ ಜವಾಬ್ದಾರಿ ಸರ್ಕಾರಕ್ಕಾಗಿ ಹೋರಾಟ ಮಾಡಿದ್ದು ನನಗೆ ನೆನಪು ಇದೆ. ಆ ಒಂದು ಸಂದರ್ಭದಲ್ಲಿ ಪ್ರಜಾಪ್ರತಿನಿಧಿ ಸಭೆಯ ಸದಸ್ಯರ ಪಾತ್ರ ಏನಿತ್ತು? ಅಂತಹವರ ಪಾತ್ರ ಈ ಹೋರಾಟಕ್ಕೆ ವಿರುದ್ಧವಾಗಿತ್ತು. ಆಗಿನ ಕಾಲದ ಮಾನ್ಯ ಹನುಮಂತಯ್ಯನವರು ಹೋರಾಟ ಮಾಡುವುದಕ್ಕೆ ಕರೆ ಕೊಟ್ಟಾಗ ನಾನೂ ಕೂಡ ವಿದ್ಯಾರ್ಥಿಯಾಗಿದ್ದೆ. ಆಗ ನಾನು ಭಾಗವಹಿಸಿದ್ದು, ಒಂದು ವರ್ಷ ಕಠಿಣ ಶಿಕ್ಷೆಯನ್ನು ಅನುಭವಿಸಿದ ನೆನಪು ಇದೆ. ಅವತ್ತಿನ ದಿವಸ ಯಾರು ರಾಜಮಹಾರಾಜರ ಆಳ್ವಿಕೆಗೆ ಬೆಂಬಲವನ್ನು ಕೊಟ್ಟರು ಅಂತಹವರಿಗೆ ಪೆನ್‌ಷನ್ ಕೊಡುವುದು ನ್ಯಾಯವೇ? ಇನ್ನು ಎರಡನೆಯದಾಗಿ ಇವರು ಬಡವರು ಅಥವಾ ನಿರ್ಗತಿಕರು ಎಂದು ತಿಳಿದು ತಾವು ವಿಶ್ರಾಂತಿ ವೇತನ ಕೊಡುತ್ತಿದ್ದರೆ ಆ ವಿಷಯವೇ ಬೇರೆ. ಅವರೇನೂ ಹಾಗೆ ಇರಲಿಲ್ಲ. ಅಧ್ಯಕ್ಷರೇ, ಆಗಿನ ಒಂದು ಎಲೆಕ್ಟೋರೇಟ್ ಯಾವ ರೀತಿ ಇತ್ತು ಎಂಬುದು ನಿಮಗೇ ಗೊತ್ತಿದೆ. ಅವತ್ತಿನ ದಿವಸ ದೊಡ್ಡ ದೊಡ್ಡ ಭೂಮಾಲೀಕರು ಆಸ್ತಿವಂತರೇ ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗುವುದು ಇತ್ತು. ನಮ್ಮಂತಹ ಜನ ಯಾರೂ ಅಂದು ಮುಂದೆ ಬರುವುದಕ್ಕೆ ಸಾಧ್ಯವಿರಲಿಲ್ಲ. ಅವತ್ತಿನ ದಿವಸ ಯಾರು ಅನುಕೂಲಸ್ಥರಾಗಿದ್ದರು ಅಂತಹವರಿಗೆ ಇವತ್ತು ಪೆನ್‌ಷನ್ ಕೊಡುವುದು ಎಂದರೆ ಏನು ಸ್ವಾಮಿ? ಇದಕ್ಕೆ ರಾಜಕೀಯವಾಗಿಯೂ ಅರ್ಥವಿಲ್ಲ, ಆರ್ಥಿಕವಾಗಿಯೂ ಅರ್ಥವಿಲ್ಲ. ಆದ್ದರಿಂದ ಈ ರೀತಿಯ ಒಂದು ಮಸೂದೆ ಮಾಡುವುದು ಅರ್ಥವಿಲ್ಲದ್ದು ಎಂದು ನಾನು ಹೇಳುತ್ತೇನೆ. ಇನ್ನು ಇದರಿಂದ ಅನುಕೂಲಪಡೆಯುವವರ ಸಂಖ್ಯೆ ಬಹಳ ಕಡಿಮೆ ಇದೆ. ಇಂತಹವರು ಎಷ್ಟೋ ಜನ ತಮ್ಮ ಜೀವನದ ಕೊನೆಗಾಲದಲ್ಲಿ ಇದ್ದು ಎಷ್ಟೋ ಜನ ಇತಿಹಾಸವನ್ನು ಸೇರಿದ್ದಾರೆ. ಇಂತಹವರಿಗೆ ಪೆನ್‌ಷನ್ ಕೊಡುವುದು ಅರ್ಥವಿಲ್ಲದ್ದು. ಇವತ್ತು ಅವರ್ಯಾರೂ ಬಂದು ತಮಗೆ ವಿಶ್ರಾಂತಿ ವೇತನ ಬೇಕೆಂದು ಕೇಳದಿರುವಾಗ ಇಂತಹವರಿಗೆ ವಿಶ್ರಾಂತಿ ವೇತನ ಕೊಡುವುದು ಸರಿಯಲ್ಲ, ನ್ಯಾಯವಾದುದಲ್ಲವೆಂದು ನಾನು ಹೇಳುತ್ತೇನೆ.

***ಡಾ॥ ಹೆಚ್. ಎಲ್. ತಿಮ್ಮೇಗೌಡ** (ಬಸವನಗುಡಿ).— ಮಾನ್ಯ ಅಧ್ಯಕ್ಷರೇ, ಈ ವಿಧೇಯಕದ ಬಗ್ಗೆ ಮಾನ್ಯ ಭೀಮಣ್ಣ ಖಂಡ್ರೆಯವರು ಮಾತನಾಡುತ್ತಾ 1 ವರ್ಷ, 6 ತಿಂಗಳು ಸದಸ್ಯರಾದವರಿಗೆಲ್ಲಾ ವಿಶ್ರಾಂತಿ ವೇತನ ಕೊಡುವುದರಿಂದ ಭ್ರಷ್ಟಾಚಾರ ಆಗುತ್ತಿದೆ ಎಂದು ಹೇಳುತ್ತಿದ್ದಾರೆ. ಅವರ ಪಕ್ಷದ ಸರ್ಕಾರ ಇಲ್ಲಿ ಇದ್ದಾಗ ಬೈ ಎಲೆಕ್ಷನ್‌ನಲ್ಲಿ ನಿಂತು ಗೆದ್ದಂತಹ ವಿಧಾನಸಭಾ ಸದಸ್ಯರಿಗೂ ವಿಶ್ರಾಂತಿ ವೇತನ ಕೊಡಬೇಕೆಂದು ಕಾನೂನು ಮಾಡಿಕೊಂಡಿದ್ದಾರೆ. ಈ ಒಂದು ಕಾನೂನನ್ನು ಈ ಸರ್ಕಾರವೇ ಹೊಸದಾಗಿ ಮಾಡಿರುವಂತಹದ್ದೇನಲ್ಲ. ಹಿಂದೆ ಇದ್ದ ಕಾನೂನಿಗೆ ಈ ಒಂದು ವಿಷಯವನ್ನು ಸೇರಿಸಿದ್ದಾರೆ. ಹಾಗೂ ಮಾನ್ಯ ಕೃಷ್ಣನ್ ಅವರು ಮಾತನಾಡುವಾಗ ಆಗಿನ ಕಾಲದಲ್ಲಿ ರೆಪ್ರೆಸೆಂಟೆಟಿವ್ ಅಸೆಂಬ್ಲಿಯಲ್ಲಿನ ಸದಸ್ಯರು ಜನ ಹಿತಕ್ಕಾಗಿ ಬೆಂಬಲ ಕೊಡದೆ ಆಗಿನ ಸರ್ಕಾರಕ್ಕೆ ಬೆಂಬಲ ಕೊಡುತ್ತಿದ್ದರೆಂದು ಹೇಳಿದರು. ಆದರೆ ಆಗ ಎಲ್ಲರೂ ಅಂತಹವರು ಇರಲಿಲ್ಲ ಆಗಿನ ಕಾಲದಲ್ಲೂ ಜನರ ಹಿತದ ಕಡೆ ಗಮನಹರಿಸತಕ್ಕಂತಹ ಸದಸ್ಯರು ಇದ್ದರು ಎಂಬುದನ್ನು ಮರೆಯಬಾರದು.

ಶ್ರೀ ಎಂ.ಎಸ್. ಕೃಷ್ಣನ್.—ಶಂಕರಪ್ಪನವರಿಗೆ ಗುಂಡು ಹಾಕಿದ್ದಕ್ಕೆ ಈ ಜನ ಬೆಂಬಲ ಕೊಟ್ಟರು, ಇಂತಹ ಜನಕ್ಕೆ ನೀವು ಬೆಂಬಲ ಕೊಡುತ್ತಿರುವುದು ಸರಿಯೇ ಎಂದು ನಾನು ಕೇಳುತ್ತಿದ್ದೇನೆ.

---

* ಈ ಚಿಹ್ನೆಯು ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.— ಇದರಲ್ಲಿ ಹಿಂದೆ ಇರತಕ್ಕ ಸದಸ್ಯರು ಕೊಡಗಿನಲ್ಲಿ ಇದ್ದವರು ಕರ್ನಾಟಕಕ್ಕೆ ಸೇರಿದಂಥವರು ಇದ್ದರು. ನಮ್ಮ ಸ್ವರಾಜ್ಯಕ್ಕೋಸ್ಕರ ಹೋರಾಟ ಮಾಡಿದವರೂ ಇದ್ದಾರೆ. ಆದ್ದರಿಂದ ಕೊಡತಕ್ಕದ್ದು ಒಳ್ಳೆಯದು.

ಶ್ರೀ ಪಿ. ರಾಮಚಂದ್ರರಾವ್.— ಹಿಂದೆ ನಾನು ಎಂ.ಎಲ್.ಎಗಳಿಗೆ ಪೆನ್‌ಷನ್ ಕೊಡುವುದನ್ನು ವಿರೋಧ ಮಾಡಿದ್ದೇನೆ. ಮಾನ್ಯ ಕೃಷ್ಣನ್ ಅವರು ಏನು ಹೇಳಿದ್ದಾರೆ ಅದಕ್ಕೆ ನಾನು ಬೆಂಬಲ

ಕೊಡುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.— ಮಾನ್ಯ ಸದಸ್ಯರಾದ ತಿಮ್ಮೇಗೌಡರು ರೆಪ್ರಸೆಂಟೆಟಿವ್ ಅಸೆಂಬ್ಲಿ ಮೆಂಬರ್ಸ್‌ಗಳಲ್ಲಿ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದವರೂ ಇದ್ದಾರೆ ಎಂದು ಹೇಳಿದರು. ಅವರಿಗೆ ಪೊಲಿಟಿಕಲ್ ಫ್ರೀಡಮ್ ಫೈಟರ್ಸ್ ಪೆನ್‌ಷನ್ ಸೆಂಟ್ರಲ್ ಗವರ್ನ್‌ಮೆಂಟ್‌ನಿಂದ ಕೊಡುತ್ತಿದ್ದಾರೆ. ಆದ್ದರಿಂದ, ಎಲ್ಲಾ ಒಟ್ಟಿಗೆ ಸೇರಿಸಿದರೆ ಹೇಗೆ?

ಶ್ರೀ ಎ. ಲಕ್ಷ್ಮೀಸಾಗರ್.— ನಾನು ಇದರ ಬಗ್ಗೆ ಸ್ಥೂಲವಾಗಿ ಹೇಳಿದ್ದೇನೆ. ಇದರ ಬಗ್ಗೆ ಸಾಕಷ್ಟು ವಿಚಾರ ಮಾಡಿ ಈ ತಿದ್ದುಪಡಿ ಮಸೂದೆಯನ್ನು ತಂದಿದ್ದೇನೆ. ರಾಜಕೀಯವಾಗಿ ಮಾತ ನಾಡುವುದಾದರೆ, ತುರ್ತುಪರಿಸ್ಥಿತಿಯಲ್ಲಿ ಈ ದೇಶದ ಕುಲಾಮಯನ್ನೇ ತಲೆಕೆಳಕು ಮಾಡತಕ್ಕಂಥ ಪರಿಸ್ಥಿತಿಯನ್ನು ತಂದೊಡ್ಡಿದ್ದ ಶಾಸಕರೂ ಇದ್ದಾರೆ ಅವರಿಗೆ ಪೆನ್‌ಷನ್ ಕೊಡುತ್ತಿದ್ದೇವೆ. ಹಿಂದೆ ಮಾಡಿದವರು ತಿಳಿಯದೆಯೋ, ತಿಳಿದೋ ಮಾಡಿದ್ದಾರೆ ನಿಮ್ಮ ಹಾಗೆ ನಾವೂ ಸೇವೆ ಸಲ್ಲಿಸಿದ್ದೇವೆ ಎಂದು ಹೇಳಿದ್ದಾರೆ. ಇದನ್ನು ವ್ಯಾಪಕವಾಗಿ ಚರ್ಚೆ ಮಾಡಲಿಕ್ಕೆ ಹೋದರೆ ನಾವು ಯಾರೂ ಕೂಡಾ ಪೆನ್‌ಷನ್ ತೆಗೆದುಕೊಳ್ಳುವ ಹಾಗೆ ಇಲ್ಲ. ಹಾಗೆ ತೆಗೆದುಕೊಳ್ಳಬೇಕೆಂದು ಈ ಸಭೆ ತೀರ್ಮಾನ ಮಾಡಿದೆ, ಆ ಪ್ರಕಾರ ತೆಗೆದುಕೊಳ್ಳುತ್ತಿದ್ದೇವೆ. ಆದ್ದರಿಂದ, ಇವರಲ್ಲೂ ಸಹ ಕೆಲವರಿಗೆ ನಾವು ಕೊಡಬೇಕಾದ ಸ್ಥಿತಿ ಇದೆ. ಅಷ್ಟು ಕಟುವಾದ ಟೀಕೆ ಬೇಕಾಗಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.— ಇದನ್ನು ವೈಯುಕ್ತಿಕವಾಗಿ ತೆಗೆದುಕೊಳ್ಳಬಾರದು. ನಮಗೆ ಅವರ ಮೇಲೆ ಅಪಾರ ಅಭಿಮಾನ ಇದೆ. ಗೌರವ ಇಲ್ಲ ಎಂದು ಅಲ್ಲ. ರಾಜಕೀಯ ಪ್ರಶ್ನೆ ಬಂದಾಗ ಇದರ ಬಗ್ಗೆ ರಾಜಕೀಯವಾಗಿ ಹೇಳಬೇಕಾಗುತ್ತದೆ. ಆ ದೃಷ್ಟಿಯಿಂದ ನಾನು ಹೇಳುತ್ತಿದ್ದೇನೆ.

Mr. Speaker.— I will now put the consideration motion to the vote of the House. The question is :

"That the Karnataka Legislature Salaries, Pension and Allowances (Amendment) Bill, 1984 be taken into consideration."

The Motion was adopted

Clause 2 and 3

Mr. Speaker.— The question is :

"That Clauses 2 and 3 do stand part of the Bill."

The Motion was adopted and clauses 2 and 3 were added to the Bill.

Clause 1, etc.

Mr. Speaker.— The question is :

"That Clause 1, the long Title, the preamable and the Enacting Formula do stand part of the Bill."

The Motion was adopted and clause 1, the long title, the preamble and the enacting formula were added to the Bill.

Motion to pass

Sri A. Lakshmi sagar.— Sir, I beg to move :

"That the Karnataka Legislature Salaries, Pensions and Allowances (Amendment) Bill, 1984 be passed."

Mr Speaker.— The question is :

"That theKarnataka Legislature Salaries Pensions and Allowances (Amendment) Bill, 1984 be passed."

The Motion was adopted and the Bill was passed.

2. ಸಚಿವರ ಹೇಳಿಕೆ

ವಿಷಯ : ವಿದ್ಯುತ್ ಸರಬರಾಜಿನ ಮೇಲೆ ನಿರ್ಬಂಧ ವಿಧಿಸಿರುವ ಬಗ್ಗೆ

Mr Speaker.— Now, the Hon'ble Minister for Power to make a statement.